




## ನಕ್ಕುಬಿಡಿ

ಡಾಕ್ಟರ್: ಮದ್ಯಪಾನ ಮಾಡುತ್ತಿಯಾದರೆ ಅದಕ್ಕೆ ತಕ್ಕಂತೆ ವ್ಯಾಯಾಮವನ್ನು ಮಾಡಬೇಕು.

ಕುಡುಕ: ಸರ್, ನಾನು ವೈನ್‌ಶಾಪಿನವರೆಗೆ ನಡೆದುಕೊಂಡೇ ಹೋಗುತ್ತೇನೆ.

★★★

ಹೆಂಡತಿ ತುಂಬ ಹೊತ್ತು ಬಾತ್‌ರೂಮ್‌ನಿಂದ ಹೊರಗೆ ಬಾರದಿದ್ದಾಗ ಗುಂಡ ಆತಂಕದಿಂದ ಬಾತ್‌ರೂಂ ಕದ ತಟ್ಟಿದ. ಆಗ ಒಳಗಿನಿಂದ ಧ್ವನಿ ಬಂತು: 'ಸಂತೋಷ ಪಡಬೇಡ, ನಿನ್ನ ಶ್ರೀದೇವಿ ಜೀವಂತವಾಗಿದ್ದಾಳೆ'

★★★

ಗಂಡಸರಿಗೆ ಒಂದು ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸಂತೋಷವನ್ನು ಮೂರೇ ಶಬ್ದಗಳಲ್ಲಿ ವಿವರಿಸಬೇಕು. ಸ್ಪರ್ಧಿಗಳೆಲ್ಲ ದಪ್ಪ ದಪ್ಪನೆಯ ಪುಸ್ತಕಗಳನ್ನು ತಿರುವಿ ಹಾಕತೊಡಗಿದರು. ಆದರೆ ಗುಂಡ ಬರೆದ 'ಹೆಂಡತಿ ತೌರಿಗೆ ಹೋದಳು.'

★★★

ಇಬ್ಬರು ಭಿಕ್ಷುಕ ಹುಡುಗರು ರಸ್ತೆಯ ಮೇಲೆ ಬೇಡುತ್ತಿದ್ದರು. ಆಗ ಒಬ್ಬ, ಇನ್ನೊಬ್ಬನಿಗೆ ಹೇಳಿದ, 'ಒಂದು ವೇಳೆ ಲಾಟರಿಯಲ್ಲಿ ನಿನಗೆ ಹತ್ತು ಲಕ್ಷ ರೂ ಬಹುಮಾನ ಬಂದರೆ ನೀನು ಏನು ಮಾಡುವೆ?'

'ನಾನು ಅದರಿಂದ ಒಂದು ಕಾರನ್ನು ಖರೀದಿಸುತ್ತೇನೆ.'

'ನಾವಿಬ್ಬರು ಅದರಲ್ಲಿ ಕುಳಿತು ಭಿಕ್ಷೆ ಬೇಡೋಣ' ಎಂದ ಇನ್ನೊಬ್ಬ.

★★★

'ನಿನ್ನ ಮದುವೆ ಒಂದೇ ರೀತಿ ಕಾಣುವ ಅವಳಿ ಸಹೋದರಿಯರಲ್ಲಿ ಒಬ್ಬಳೊಂದಿಗೆ ನಡೆದರೆ ನಿನ್ನ ಹೆಂಡತಿಯನ್ನು ಹೇಗೆ ಗುರುತಿಸುವೆ' ಎಂದು ಗುಂಡನ ಗೆಳೆಯ ಗುಂಡನಿಗೆ ಕೇಳಿದ.

'ಇಬ್ಬರ ಜಡೆಯನ್ನು ಹಿಡಿದು ಎಳೆಯುತ್ತೇನೆ. ಗುರಾಯಿಸಿದರೆ ಹೆಂಡತಿ, ಮುಗುಳ್ನಕ್ಕರೆ ನಾದಿನಿ ಎಂದು ತಿಳಿಯುತ್ತೇನೆ' ಎಂದ ಗುಂಡ.

★★★

ಯುವಕ: ನಾನು ನಿಮ್ಮ ಮಗಳನ್ನು ಮದುವೆಯಾಗ ಬಯಸುತ್ತೇನೆ.

ಯುವತಿಯ ತಂದೆ: ತಿಂಗಳಿಗೆ ಎಷ್ಟು ಗಳಿಸುತ್ತಿ?

ಯುವಕ: 15 ಸಾವಿರ ರೂ.ಗಳು

ಯುವತಿಯ ತಂದೆ: ನಾನು ಪ್ರತಿ ತಿಂಗಳು ಅಷ್ಟು ಹಣವನ್ನು ನನ್ನ ಮಗಳಿಗೆ ಪಾಕೆಟ್ ಮನಿಯಾಗಿ ನೀಡುತ್ತೇನೆ.

ಯುವಕ: ನಾನು ಅದನ್ನು ಸೇರಿಸಿಕೊಂಡೇ ಹೇಳುತ್ತಿರುವುದು.

★★★

ಒಂದು ಬಾರಿ ಒಂದು ಎತ್ತು ಹಾಗೂ ಒಂದು ಹುಲಿ ಕುಡಿಯಲು ಕುಳಿತವು. ಎರಡು ಪೆಗ್ ಹಾಕಿದೊಡನೆಯೇ ಹುಲಿ ಎದ್ದು ಮನೆಗೆ ಹೊರಡಲು ಸಿದ್ಧವಾಯಿತು.

ಎತ್ತು ಹೇಳಿತು: 'ಏಕೆ ಮಿತ್ರ ತುಂಬಾ ಗಡಿಬಿಡಿ ಮಾಡುತ್ತಿರುವೆ, ಇನ್ನೊಂದೆರೆಡು ಪೆಗ್ ಹಾಕಬಾರದೆ?'

ಹುಲಿ: ನೀನು ಮನೆಗೆ ಹೋದರೆ ನಿನ್ನ ಹೆಂಡತಿ ಹಸು ಇದೆ. ಪಾಪ ಸಾಧು ಪ್ರಾಣಿ. ನನ್ನ ಮನೆಯಲ್ಲಿ ನನ್ನ ಹೆಂಡತಿಯಾಗಿ ಹೆಣ್ಣು ಹುಲಿ ಇದೆ.

★★★

ಒಂದು ಬನಾರಸಿನ ಕುಟುಂಬ ಆಸ್ಟ್ರೇಲಿಯಾದಲ್ಲಿ ಪ್ರವಾಸ ಮಾಡುತ್ತಿತ್ತು. ಕುಟುಂಬದಲ್ಲಿ ವೃದ್ಧ ತಂದೆಯೂ ಇದ್ದ. ಅವರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರಿನಲ್ಲಿ ಹೋಗುತ್ತಿರುವಾಗ ಒಬ್ಬ ಸ್ಥಳೀಯ ಮಹಿಳೆ ತನ್ನ ಕಾರಿನಲ್ಲಿ ಅವರ ಕಾರಿನ ಹಿಂದೆ ಹೋಗುತ್ತಿದ್ದಳು. ಆ ವೃದ್ಧ ಕಿಟಕಿಯಿಂದ ಮುಖ ಹೊರಗೆ ಹಾಕಿ ರಕ್ತವಾಂತಿ ಮಾಡಿಕೊಳ್ಳುತ್ತಿರುವುದನ್ನು ಕಂಡ ಕೂಡಲೇ ಅಂಬುಲೆನ್ಸಿಗೆ ಫೋನ್ ಮಾಡಿದಳು. ಹೆಲಿಕಾಪ್ಟರ್ ಅಂಬುಲೆನ್ಸ್ ಬಂದು ಆ ವೃದ್ಧನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಅಡ್ಮಿಟ್ ಮಾಡಿತು. ಆಸ್ಪತ್ರೆಯಲ್ಲಿ ವೃದ್ಧನಿಗೆ ಆಕ್ಸಿಜನ್ ನೀಡಿ ಉಪಚರಿಸಲಾಯಿತು. ಎರಡು ಲಕ್ಷ ಬಿಲ್ ತೆತ್ತು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಿಸಿಕೊಂಡು ಬಂದ ಮಗ ಸಿಟ್ಟಿನಿಂದ ತನ್ನ ತಂದೆಗೆ ಹೇಳಿದ: ಅಪ್ಪ, ಇದು ಬನಾರಸ್ ಅಲ್ಲ ಆಸ್ಟ್ರೇಲಿಯ. ಇಲ್ಲಿ ನಿನಗೆ ಪಾನ್ ತಿಂದು ಉಗುಳಲು ಯಾರು ಹೇಳಿದರು?

**(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್**

